ಎಂ.ವಿ.ಸಿ - 13/2025
ಪಿ.ಡಬ್ಲ್ಯು - 01

**ದಿನಾಂಕ : 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಡಿಬಿಎಸ್ ವಕೀಲರಿಂದಃ**

ಅಪಘಾತವನ್ನು ನಾನು ನೋಡಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ. 3 ರಲ್ಲಿ ಮತ್ತೊಬ್ಬರು ಹೇಳಿದ ಮೇರೆಗೆ ನಾನು ಆ ರೀತಿ ಹೇಳಿರುತ್ತೇನೆ. ಅಪಘಾತವಾದ ವಾಹನವನ್ನು ನನ್ನ ತಮ್ಮ ಚಲಾಯಿಸುತಿದ್ದ . ನನ್ನ ತಮ್ಮನಿಗೆ ಲೈಸೆನ್ಸ್ ಇತ್ತು. ಅದನ್ನು ಹಾಜರುಪಡಿಸುತ್ತೇನೆ. ನನ್ನ ವಾಹನ 2022 ನೇ ಇಸವಿಯ ಮೋಡೆಲ್. ಅಪಘಾತದ ಸಮಯದಲ್ಲಿ ಅದರ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ವಾಹನಕ್ಕೆ ಅಪಘಾತದ ಸಮಯದಲ್ಲಿ ಬಜಾಜ್ ಕಂಪೆಯ ಇನ್ಸುರೆನ್ಸ್ ಇತ್ತು . ಸದರಿ ಇನ್ಸುರೆನ್ಸ್ ಪಾಲಿಸಿಯನ್ನು ಹಾಜರುಪಡಿಸುತ್ತೇನೆ . ಇನ್ಸುರೆನ್ಸ್ ಕಂಪೆನಿಯಿಂದ ನನಗೆ ರೂ 6000 ಹಣ ಬಂದಿರುತ್ತದೆ . ಹಣ ಪಡೆದ ವಿಷಯವನ್ನು ನಾನು ಅರ್ಜಿಯಲ್ಲಿ ಹೇಳಿಲ್ಲ ಎಂದರೆ ಸರಿ . ನನ್ನ ವಾಹನಕ್ಕೆ ರಿಪೇರಿಗೆ ರೂ 15000 ಖರ್ಚು ಆಗಿರುತ್ತದೆ . ಸರ್ವೆ ವರದಿಯನ್ನು ನಾನು ಹಾಜರುಪಡಿಸಬಹುದು . ಅದೇ ರೀತಿ ವಿಮಾ ಕಂಪೆನಿಯಿಂದ ಎಷ್ಟು ಹಣ ಬಂದಿದೆ ಎನ್ನುವ ಬಗ್ಗೆ ದಾಖಲೆ ಕೂಡ ಹಾಜರಪಡಿಸಬಹುದು . ನನಗೆ ಎಷುಟ ಖರ್ಚು ಆಗಿದೆ ಅಷ್ಟು ಹಣ ವಿಮಾ ಕಂಪೆನಿಯಿಂದ ಬಂದಿದೆ ಎಂದರೆ ಸರಿಯಲ್ಲ. ನಾನು ಮಂಗಳೂರಿನ ವಿಮಾನ ನಿಲ್ದಾಣದಲ್ಲಿ ಸೇಲ್ಸ್ ಮ್ಯಾನ್ ಆಗಿ ಕೆಲಸ ಮಾಡುತ್ತೇನೆ. ನಾನು ಅಪಘಾತವಾದ ದ್ವಿ ಚಕ್ರ ವಾಹನದಲ್ಲಿಯೇ ನನ್ನ ಕೆಲಸಕ್ಕೆ ಹೋಗುತಿದ್ದೆ. ನನ್ನ ಮನೆ ಪಾಂಗಳದಲ್ಲಿ

ಇರುತ್ತದೆ.ಪಾಂಗಳದಿಂದ ಮಂಗಳೂರಿನ ವಿಮಾನ ನಿಲ್ದಾಣಕ್ಕೆ ಬಹಳಷ್ಟು ಬಸ್ಸುಗಳು ಒಡಾಡುತ್ತದೆ ಎಂದರೆ ಸರಿ . ಅಪಘಾತದ ದಿನ ರಜೆ ಇತ್ತು , ಆದ್ದರಿಂದ ನನ್ನ ವಾಹನವನ್ನು ನನ್ನ ತಮ್ಮನಿಗೆ ಕೊಟ್ಟಿದ್ದೆ . ಅಪಘಾತವಾದ ಮಾರನೇ ದಿನ ನಾನು ದ್ವಿಚ ಕ್ರ ವಾಹನವನ್ನು ಬಾಡಿಗೆಗೆ ಪಡೆದಿದ್ದೆ. ನಾನು 10 ದಿನಗಳ ವರೆಗೆ ಬಾಡಿಗೆಗೆ ಪಡೆದಿದ್ದೆ . ಗಾಡಿ ಸಂಖ್ಯೆ ಗೊತ್ತಿಲ್ಲ ಆದರೇ ಅದು ನನ್ನ ಸ್ನೇಹಿತನ ಗಾಡಿಯಾಗಿತ್ತು . ಅವರಿಗೆ 10 ದಿನಗಳಿಗೆ ಗಾಡಿ ಚಲಾಯಿಸಿದಕ್ಕೆ ರೂ 100 ಕೊಟ್ಟಿರುತ್ತೇನೆ . ಈ ಕೇಸಿಗಾಗಿ ನಾನು ರೂ 15000 ಹಣ ಕೊಟ್ಟಿರುತ್ತೇನೆ ಎಂದು ನನ್ನ ಅರ್ಜಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ . ನಾನು ಹೇಳುವಂತ ಮೋಟಾರು ಸೈಕಲ್ ನನ್ನ ತಮ್ಮ ಚಲಾಯಿಸುತಿದ್ದ ನನ್ನ ಮೋಟಾರು ಸೈಕಲ್ ಗೆ ಡಿಕ್ಕಿ ಹೊಡೆದಿಲ್ಲ ಎಂದರೆ ಸರಿಯಲ್ಲ. ಷದ್ರಿ ಮೋಟಾರು ಸೈಕಲ್ ಗೂ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಮ್ಮನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.ಮೋಟಾರು ಸೈಕಲ್ ನಮ್ಮ ವಾಹನಕ್ಕೆ ಡಿಕ್ಕಿ ಆಗದೇ ಇದ್ದರೂ ಕೂಡ ಅವರ ಪೊಲೀಸ್ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.

ಎಂ.ವಿ.ಸಿ - 13/2025
ಪಿ.ಡಬ್ಲ್ಯು - 01